# ಮಹಿಳಾ ವಿಶೇಷ

ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ (ಪ್ರತಿ ಮಂಗಳವಾರ) ಮೈಸೂರು

ಸಂಪುಟ 1 ಸಂಚಿಕೆ 12 Volume 1 Issue 12
Email: mahilavishesha@yahoo.com
web:www.mahilavishesha.in

ಹೆಚ್.ವಿ. ವೆಂಕಟಸುಬ್ಬರಾವ್
ಸಂಪಾದಕರು
Mobile : 8880334444 / 9379777793

ಮಂಗಳವಾರ 17-11-2015

ಮೈಸೂರು
ಪುಟ 2
ಬೆಲೆ ₹ 2

## ಮೈಸೂರು ನಗರದ ನೂತನ ಮಹಾಪೌರರು ಹಾಗೂ ಉಪ ಮಹಾಪೌರರಾಗಿ ಆಯ್ಕೆ





ಮೈಸೂರು ಮಹಾನಗರ ಪಾಲಿಕೆಯ ಮಹಾಪೌರರು ಹಾಗೂ ಉಪ ಮಹಾಪೌರರ ಚುನಾವಣೆಯು ಕಳೆದ ಶುಕ್ರವಾರ ನಡೆಯಿತು. ಕನಸು ಮನಸ್ಸಿನಲ್ಲೂ ಮಹಾಪೌರನಾಗುತ್ತೇನೆಂದು ತಮಗೆ ಗೊತ್ತಿಲ್ಲದೆ 12ನೇ ವಾರ್ಡಿನ ಸದಸ್ಯ ಬಿ.ಎಲ್. ಭೈರಪ್ಪ ಮೈಸೂರಿನ ಪ್ರಥಮ ಪ್ರಜೆಯಾಗಿ ಆಯ್ಕೆಯಾದರು. ಉಪ ಮಹಾಪೌರರಾಗಿ 65ನೇ ವಾರ್ಡಿನ ಬಿ.ಜೆ.ಪಿ. ಪಕ್ಷದ ಸದಸ್ಯರಾದ ಜಿ.ಹೆಚ್. ವನಿತಾ ಪ್ರಸನ್ನ ಆಯ್ಕೆಯಾದರು.

ಮಹಾಪೌರರು ಹಾಗೂ ಉಪಮಹಾಪೌರರು ಹೊಂದಿಕೊಂಡು ಮೈಸೂರು ನಗರದ ಸಮಗ್ರ ಅಭಿವೃದ್ಧಿಗೆ ಹಾಗೂ ನಗರವನ್ನು ಸ್ವಚ್ಛವಾಗಿಡಲು ಅಲ್ಲದೆ ಸಾರ್ವಜನಿಕರಿಗೆ ಎಲ್ಲಾ ಸೇವೆಗಳು ತ್ವರಿತ ಗತಿಯಲ್ಲಿ ದೊರೆಯುವಂತೆ ಮಾಡುವುದಾಗಿ ಆಯ್ಕೆಗೊಂಡ ತಮ್ಮ ಮನದಾಳದ ಮಾತನ್ನು ಆಡಿದರು. ಇವರ ಅವಧಿಯು ಯಾವುದೇ ಅಡತಡೆಗಳಿಲ್ಲದೆ ಸಾಗಲಿ. ಜನತೆಗೆ ನೆಮ್ಮದಿ ನೀಡುವ ಕಡೆ ಹೆಚ್ಚಿನ ಗಮನವಿರಲಿ ಎಂಬುದೇ ನಾಗರೀಕರ ಆಶಯವಾಗಿದೆ.

## ಮೈಸೂರು ಗುರಿ ನೂರು



ಮೈಸೂರು ಜಿಲ್ಲಾ ಪಂಚಾಯತ್ ವತಿಯಿಂದ ಮೈಸೂರು ಜಿಲ್ಲೆಯಾದ್ಯಂತ 2016ರ ಎಸ್‌ಎಸ್ ಎಲ್‌ಸಿ ವಿದ್ಯಾರ್ಥಿಗಳ ಫಲಿತಾಂಶ ವನ್ನು ಉನ್ನತ ಮಟ್ಟದಲ್ಲಿ ತರಲು **ಮೈಸೂರು ಗುರಿ ನೂರು** ಎಂಬ ಕಾರ್ಯ ಕ್ರಮವು ಮಕ್ಕಳ ದಿನಾಚರಣೆಯ ದಿವಸದಿಂದ ಪರೀಕ್ಷೆ ಆರಂಭವಾಗುವವರೆಗೂ ನಿರಂತರವಾಗಿ ನಡೆಯಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಡಾ. ಪುಷ್ಪಅಮರ್‌ನಾಥ್ ತಿಳಿಸಿದರು.

## ಪೃಥ್ವಿರಾಣಿಗೆ ಪಿಹೆಚ್‌ಡಿ

ಡಾ. ಎಲ್ ಪರಮೇಶ್ ಅವರ ಮಾರ್ಗದರ್ಶನದಲ್ಲಿ ಕೆ.ಎಸ್. ಪೃಥ್ವಿರಾಣಿ ಅವರು ರಚಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಹೆಚ್.ಡಿ. ಪದವಿಗೆ ಅಂಗೀಕರಿಸಿದೆ.

## ಮಾಲತಿ ಪ್ರಿಯ ಅಧಿಕಾರ ಸ್ವೀಕಾರ

ಕೊಪ್ಪ ವಿಭಾಗದ ಡಿಸಿಎಫ್ ಆಗಿದ್ದ ಮಾಲತಿ ಪ್ರಿಯ ಅವರು ಮಲೆ ಮಹದೇಶ್ವರ ವನ್ಯ ಜೀವಿ ವಿಭಾಗದ ನೂತನ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಅಧಿಕಾರವನ್ನು ಸ್ವೀಕರಿಸಿದರು.

## ಗೀತಾ ಅಕ್ಕನವರಿಂದ ಪ್ರವಚನ ಮಾಲೆ

ರಾಜಯೋಗಿನಿ ಬಿ.ಕೆ. ಗೀತಾ ಅಕ್ಕನವರಿಂದ ಮೈಸೂರಿನ ಯಾದವಗಿರಿಯಲ್ಲಿರುವ ಜ್ಞಾನಪ್ರಕಾಶ್ ಭವನದಲ್ಲಿನ. 17.18 ಮತ್ತು19ರಂದು ಬೆಳಿಗ್ಗೆ 7.00ರಿಂದ 8.00ಗಂಟೆಯವರೆಗೆ ರಾಜಯೋಗದ ಬಗ್ಗೆ ಪ್ರವಚನ ನೀಡುವವರಿದ್ದಾರೆ.

## ರೈಲ್ವೆ ಟಿಕೇಟ್ ಬುಕಿಂಗ್

ಕಾಯ್ದಿರಿಸುವ ಟಿಕೇಟ್ ಅನ್ನು ರೈಲು ಹೊರಡುವ 30 ನಿಮಿಷದ ಸಮಯದಲ್ಲಿ ಆನ್‌ಲೈನ್‌ನಲ್ಲಿ ಬುಕ್ ಮಾಡಬಹುದೆಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ. ಸೀಟ್ ಲಭ್ಯವಿದ್ದಲ್ಲಿ ದೊರೆಯುವುದು. ಕಾಯ್ದಿರಿಸದ ಟಿಕೇಟ್ ಅನ್ನು ರದ್ದು ಮಾಡಿದರೆ ರದ್ದುಗೊಳಿಸುವ ಶುಲ್ಕ ದುಪ್ಪಟ ಗೊಳಿಸಿದೆ ಎಂದು ಪ್ರಕಟಿಸಿದೆ.

## ಮಹಿಳೆಯರಿಗೆ ವಾಹನಸಾಲ

ದ್ವಿಚಕ್ರ ವಾಹನಕೊಳ್ಳಲು ಮಹಿಳೆಯರಿಗಾಗಿ ಪ್ರತ್ಯೇಕವಾಗಿ ಸಾಲದ ಕೊಡುಗೆಯನ್ನು ಮುತ್ತೂಟ್ ಫಿನ್‌ಕಾರ್ಡ್ ನೀಡಲು ಮುಂದೆ ಬಂದಿದೆ. ಮಹಿಳೆಯರು ಆಸೆ ಪಡುವ ದ್ವಿಚಕ್ರ ವಾಹನಕೊಳ್ಳಲು ಈ ಸಂಸ್ಥೆಯು ಅತಿ ಕಡಿಮೆ ಬಡ್ಡಿದರದಲ್ಲಿ (7.19%) ಹಾಗೂ ಮರುಪಾವತಿ 12/18/24 ತಿಂಗಳುಗಳ ಕಾಲಾವಕಾಶವಿರುತ್ತದೆ. ಮಂಜೂರಾತಿ ಮಾಡಲು ಕೇವಲ 30ನಿಮಿಷ ಸಾಕೆಂದು ಹೆಚ್ಚಿನ ಮಾಹಿತಿಗಾಗಿ ಮುತ್ತೂಟ್ ಫಿನ್ ಕಂಪನಿ ಬ್ರಾಂಚ್‌ಗೆ ಭೇಟಿ ಮಾಡಬಹುದಾಗಿದೆ.

## ಮಂಡ್ಯ ಜಿಲ್ಲಾ ಮಹಿಳಾ ಸಮ್ಮೇಳನ

ಮಂಡ್ಯ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಭಾರತ ಸೇವಾದಲ ಇವರ ಸಂಯುಕ್ತಾಶ್ರಯದಲ್ಲಿ ನವೆಂಬರ್ 24ರಂದು ಕಲಾಮಂದಿರದಲ್ಲಿ ಜಿಲ್ಲಾ ಮಹಿಳಾ ಸಮ್ಮೇಳನ ಆಯೋಜಿಸಲಾಗಿದೆ.



ಬ್ರಿಟನ್ ಪ್ರಧಾನಿ ಪತ್ನಿ ಸಮಂತ್ ಮೋದಿಯವರೊಂದಿಗೆ ಭಾರತದ ನಾರಿಯ ಉಡುಗೆಯಲ್ಲಿ



ರಾಷ್ಟ್ರಪತಿಗಳಿಗೆ ದೀಪಾವಳಿ ಹಬ್ಬದ ಶುಭಾಶಯ ಕೋರುತ್ತಿರುವುದು.

## ಕಣ್ಣುಳ್ಳವರಿಗೆ ಕಡಿಮೆಯಿಲ್ಲದ ಎಂ.ಕೆ. ರುಕ್ಮಿಣಿ ಮೇಡಂ ಮೈಸೂರು ಕೃಷ್ಣಮೂರ್ತಿಪುರಂ ನಿವಾಸಿ



ಮಳೂರು ಗ್ರಾಮ, ಚೆನ್ನಪಟ್ಟಣ ತಾಲ್ಲೂಕು, ಹುಟ್ಟೂರಿನ ಎಂ.ಎನ್. ಕೃಷ್ಣನ್ ಹಾಗೂ ಎಂ.ಕೆ. ಗರಡಮ್ಮನವರ ದ್ವಿತೀಯ ಪುತ್ರಿಯೇ ರುಕ್ಮಿಣಿಯವರು ಇವರು ಹುಟ್ಟಿನಿಂದಲೇ ಕಣ್ಣು ಕಾಣದವರಾಗಿದ್ದು ತಡವಾಗಿ ಶಾಲೆಗೆ ದಾಖಲಾತಿ ಹೊಂದಿ 1 ರಿಂದ 6 ನೇ ತರಗತಿವರೆಗೆ ವ್ಯಾಸಂಗ ಮಾಡಿ 1969ನೇ ಇಸವಿಯಲ್ಲಿ ಖಾಸಗಿ ಅಭ್ಯರ್ಥಿಯಾಗಿ ಕುಳಿತುಕೊಂಡು ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿರುತ್ತಾರೆ. ನಂತರ ಪಿಯುಸಿಗೆ ಸೇರಿ ತೇರ್ಗಡೆ ಹೊಂದಿ, ಪದವಿ ತರಗತಿಯ ಮೊದಲನೇ ವರ್ಷಕ್ಕೂ ಸಹ ಮೈಸೂರಿನಲ್ಲಿ ಕಾಲೇಜಿಗೆ ಸೇರಿದ್ದರು.

ಚಿಕ್ಕಂದಿನಲ್ಲೇ ಇವರು ಸಂಗೀತ ವಿದ್ಯಾಭ್ಯಾಸವನ್ನು ಮಾಡಿ ಸೀನಿಯರ್ ಗ್ರೇಡ್ ಸಂಗೀತ ಪರೀಕ್ಷೆಯನ್ನು ಪಾಸು ಮಾಡಿಕೊಂಡಿದ್ದರು. ಅವರಿಗೆ 1970ನೇ ಇಸವಿಯಲ್ಲಿ ಸಂಗೀತ ಶಿಕ್ಷಕಿಯಾಗಿ ಸರ್ಕಾರದಿಂದ ನೇಮಕಾತಿಗೊಂಡು ಶ್ರೀರಂಗಪಟ್ಟಣದ ಪ್ರಾಥಮಿಕ ಶಾಲೆಯಲ್ಲಿ ಕೆಲಸಕ್ಕೆ ಹಾಜರಾಗಿ ಐದುವರೆ ವರ್ಷ ಸೇವೆ ಸಲ್ಲಿಸಿ ನಂತರ ಮೈಸೂರು ನಗರದ ಲಕ್ಷ್ಮೀಪುರಂ ಶಾಲೆಗೆ ವರ್ಗಾವಣೆಯನ್ನು ಪಡೆದುಕೊಂಡು 2005 ರವರೆಗೂ ಸೇವೆಯನ್ನು ಸಲ್ಲಿಸಿ ನಿವೃತ್ತಿಯಾಗಿರುತ್ತಾರೆ. 35ವರ್ಷಗಳ ಕಾಲ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ಸಾವಿರಾರು ವಿದ್ಯಾರ್ಥಿಗಳ ಜೀವನಕ್ಕೆ ಮೆರಗನ್ನು ನೀಡಿರುತ್ತಾರೆ. ಇವರು ವೈವಾಹಿಕ ಜೀವನದ ಕಡೆ ಮನಸ್ಸು ಮಾಡದ್ದರಿಂದ ಅವಿವಾಹಿತರಾಗೆ ಇದ್ದು ಪೋಷಕರನ್ನು ನೋಡಿಕೊಂಡಿದ್ದರು.

ಮೈಸೂರಿನಲ್ಲಿರುವ ಟೇರಿಷಿಯನ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿರುವ ಆರ್ ವಸಂತ, ಶಿಕ್ಷಕಿಯಾಗಿ ಕೆಲಸ ಮಾಡುತ್ತಿರುವ ಜಿ.ಎನ್. ಜ್ಯೋತಿ ಹಾಗೂ ಎನ್.ಐ.ಇ. ಕಾಲೇಜಿನಲ್ಲಿ ಇಂಜಿನಿಯರಿಂಗ್ ಪದವಿ ಮುಗಿಸಿರುವ ಎಸ್. ಲತಾ, ಹೀಗೆ ಹಲವಾರು ಮಕ್ಕಳುಗಳು ರುಕ್ಮಿಣಿಯವರ ವಿದ್ಯಾರ್ಥಿಗಳಾಗಿದ್ದವರು. ವಿದ್ಯಾರ್ಥಿಗಳೆಂದರೆ ಇವರಿಗೆ ಬಹಳ ಅಚ್ಚುಮೆಚ್ಚು ಅಲ್ಲದೆ ಜೀವನ ಬಗೆಗಿನ ಎಲ್ಲಾ ಸೂಕ್ಷ್ಮ ವಿಚಾರಗಳನ್ನು ತಿಳಿಯಲ್ಪಡಿಸುತ್ತಿದ್ದರು. ಈಗಲೂ ಕೆಲವು ವಿದ್ಯಾರ್ಥಿನಿಯಾಗಿದ್ದವರು ಇವರ ಮನೆಗೆ ಭೇಟಿ ನೀಡಿ ಮಾತನಾಡಿಸುವ ಪದ್ಧತಿಯನ್ನು ಇಟ್ಟಿಕೊಂಡಿದ್ದಾರೆ.

ರುಕ್ಮಿಣಿಯವರು ತಮ್ಮ ಮನೆಯ ಎಲ್ಲಾ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಾರೆ. ಇದು ಆಶ್ಚರ್ಯವೂ ಹೌದು, ಅಲ್ಲದೆ ಸಂದರ್ಶನದ ವೇಳೆಯಲ್ಲಿ ನಾನು ಕಂಡ ದೃಶ್ಯಗಳೇ ಅದಕ್ಕೆ ಸಾಕ್ಷಿಯಾಗಿವೆ. ಸದಾ ಇವರ ಯೋಚನೆ ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕೆಂಬ ಹಂಬಲ ಅದಕ್ಕೆ ಅವರ ಮನೆಗೆ ಬರುವ ವಿದ್ಯಾರ್ಥಿಗಳ, ಸ್ನೇಹಿತರುಗಳ ಬಳಿ ಒಳ್ಳೆ ಒಳ್ಳೆಯ ವಿಷಯಗಳನ್ನು ಚರ್ಚಿಸುತ್ತಾರೆ. ಅಲ್ಲದೆ ಅನುಭವದಿಂದ ಸಮಸ್ಯೆಯನ್ನು ಬಗೆಹರಿಸುವ ಜಾಣ್ಮೆ ಇವರಲ್ಲಿದೆ. ಪ್ರತಿನಿತ್ಯ ಮನೆಗೆ ಬಂದು ಹೋಗುವವರಿಂದ ಇವರಿಗೆ ನಿವೃತ್ತಿಯಾಗಿದೆ ಎಂಬ ಕಲ್ಪನೆಯೇ ಇಲ್ಲದೆ ಲವಲವಿಕೆಯಿಂದ ಜೀವನವನ್ನು ಸಾಗಿಸುತ್ತಿದ್ದಾರೆ.

ಮೊದಲನಿಂದಲೂ ಇವರ ಹವ್ಯಾಸ ರೇಡಿಯೋದಲ್ಲಿ ಬರುವ ಎಲ್ಲಾ ಕಾರ್ಯಕ್ರಮಗಳನ್ನು ಕೇಳುವುದು, ರೇಡಿಯೋ ಅಂದರೆ ಇವರಿಗೆ ಪಂಚಪ್ರಾಣ, ಹಾಗೂ ಜೀವನ ಸಂಗಾತಿ. ಬೆಳಿಗ್ಗೆಯಿಂದ ರಾತ್ರಿಯವರೆಗೂ ರೇಡಿಯೋ ಜೊತೆಗಿನ ಸಂಬಂಧ ಹಾಗೂ ಮೈಸೂರು ಆಕಾಶವಾಣಿಯ ಬಾನುಲಿ ಕೇಂದದೊಂದಿಗೆ ಸಂಪರ್ಕವಿಟ್ಟುಕೊಂಡಿರುತ್ತಾರೆ. ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಅಲ್ಲದೆ ಇವರು **'ಸಮುದ್ಯತಾ ಶೋತ್ರಗಳ ಸಂಘ'** ಸಂಸ್ಥೆಯ ಸದಸ್ಯೆಯಾಗಿರುತ್ತಾರೆ. ಆ ಸಂಸ್ಥೆಯ ಅಧ್ಯಕ್ಷರು ಶ್ರೀಮತಿ ಜಯಲಿಂಗಣ್ಣ ನವರು ಹಾಗೂ ಶ್ರೀಮತಿ ಸುಧಾರಾಜ್‌ರವರು ಕಾರ್ಯದರ್ಶಿಗಳಾಗಿರುತ್ತಾರೆ. ಈ ಸಂಘವು ರೇಡಿಯೋ ಕಾರ್ಯಕ್ರಮವನ್ನು ಕೇಳುವವರನ್ನು ಮಾತ್ರ ಸದಸ್ಯರನ್ನಾಗಿ ಮಾಡಿಕೊಂಡಿರುತ್ತಾರೆ. ಮೈಸೂರು, ಹಾಸನ, ಮಂಡ್ಯ, ಚಾಮರಾಜನಗರ, ಹೀಗೆ ವಿವಿದ ಊರುಗಳಿಂದ ಸುಮಾರು ಎಂಭತ್ತು ಜನ ಸದಸ್ಯರುಗಳಿರುತ್ತಾರೆ.

ರುಕ್ಮಿಣಿಯವರ ಅಭಿಪ್ರಾಯ ಹಾಗೂ ಅನಿಸಿಕೆ ಹೇಗಿದೆ ಎಂದರ ಇಂದಿನ ಯುವಕ, ಯುವತಿಯರು ಓದುವ ಹಾಗೂ ಕೇಳುವ ಸಂಖ್ಯೆಯು ಕುಸಿದಿದೆ ಇನ್ನಿತರೆ ಮಾಧ್ಯಮಗಳ ಜೊತೆ ಬೆರೆತು ಹಲವಾರು ಒಳ್ಳೆ ಒಳ್ಳೆಯ ಅಭಿರುಚಿ ಗುಣಮಟ್ಟವನ್ನು ಕಾಯ್ದುಕೊಳ್ಳುವಲ್ಲಿ ವಿಫಲರಾಗುತ್ತಿದ್ದಾರೆ ಆದರೆ ಅವರವರ ಇಚ್ಛೆಗೆ ಬಿಟ್ಟದ್ದು ಒಟ್ಟಿನಲ್ಲಿ ನನ್ನ ಆಯ್ಕೆ ರೇಡಿಯೋ ಎಲ್ಲವನ್ನು ಕೇಳುತ್ತೇನೆ ಹಾಗೆಯೇ ಜೊತೆ ಜೊತೆಯಲ್ಲಿಯೇ ಕೆಲಸವನ್ನು ಮಾಡಿಕೊಳ್ಳುತ್ತೇನೆ. ಇದು ನನಗೆ ಇಷ್ಟ. ಸ್ನೇಹಿತರ ಗುಂಪಿನಲ್ಲಿ ಇವರು ಇದ್ದೇ ಇರುತ್ತಾರೆ. ಅದು ಇವರಿಗೆ ತುಂಬಾ ಸಂತೋಷವನ್ನು ತಂದು ಕೊಡುವಂತಾಗಿದೆ. ಇವರ ಕಾರ್ಯಾಚರಣೆಯನ್ನು ನೋಡಿದರೆ ಕಣ್ಣುಳ್ಳವರು ಕೆಲವೊಮ್ಮೆ ಸೋಮಾರಿಯಾಗಬಹುದು ಆದರೆ ಶ್ರದ್ಧೆ, ಮಾನವೀಯತೆಯ ಗುಣ, ಸಂಸ್ಕಾರ, ಪ್ರೀತಿ, ಸ್ನೇಹ ಎಲ್ಲವೂ ರುಕ್ಮಿಣಿಯವರಲ್ಲಿ ಅಪಾರವಾಗಿ ತುಂಬಿದೆ.

- ನಿರೂಪಣೆ ಹೆಚ್‌ವಿಎಸ್

## ಬದುಕೇ ಹೀಗೆ !

"ಸಿಗದಿರುವುದನ್ನು ಹುಡುಕಬೇಡಿ, ಸಿಗುವುದನ್ನು ಬಿಡಬೇಡಿ."

## ನಡೆ - ನುಡಿ

"ನೀತಿಯನ್ನು ತಿಳಿದರೆ ಸಾಲದು, ಅದನ್ನು ಅನುಸರಿಸಬೇಕು." -ಅನಾಮಿಕ

## ಒಗಟು

"ಊರುಂಟು ಜನರಿಲ್ಲ, ನದಿಯುಂಟು ನೀರಿಲ್ಲ, ರಸ್ತೆಯುಂಟು ವಾಹನವಿಲ್ಲ ಹಾಗಾದರೆ ನಾನ್ಯಾರು?" (ಉತ್ತರ ಕಳಿಸಿ)

## ಹೇಗಿರಬೇಕು?

"ಸೋಲು ಗೆಲುವಿನ ಒಂದು ಮೆಟ್ಟಿಲು, ಅಷ್ಟೇ ಅಲ್ಲ ಸೋಲಿನಿಂದ ಸತ್ಯದ ಅರಿವು ಮೂಡುವುದು."

## ವಿಚಿತ್ರವಾದರೂ ನಿಜ !

ಸಿಂಗಾಪುರದಲ್ಲಿ ನಾಯಿಗಳು ನಗರದೊಳಗೆ ಬರುವಂತಿಲ್ಲ

## ಸುಂಸುಂನೆ

### ಮುದ್ದೆ ತಿನ್ನೋರೆಲ್ಲಾ

ಶಾಲೆಯೊಂದರಲ್ಲಿ ಮಿಸ್ ವಿದ್ಯಾರ್ಥಿಗಳನ್ನು ಕುರಿತು ಹೇಳಿದರು. ಬರೇ ವ್ಯೆಯೊಳಗಿರೋರೆಲ್ಲಾ ಗಾಂಧೀಜಿಯಾಗೊಲ್ಲ ಇದರಂತೆ ನೀವು ಒಂದು ವಾಕ್ಯ ಹೇಳಿ ? ಎಂದರು.

ವಿದ್ಯಾರ್ಥಿಗಳು ಯೋಚಿಸಲಾರಂಭಿಸಿದರು ಕೊನೆಗೆ ಸುಬ್ಬು ಎದ್ದು ನಿಂತು ಮಿಸ್ ಮುದ್ದೆಯನ್ನು ತಿಂದೋರೆಲ್ಲಾರುನೂ ಪ್ರಧಾನಿಗಳಾಗೊಲ್ಲ ಎಂದು ಕೈಕಟ್ಟಿ ಉತ್ತರಿಸಿದ. ಸಹಪಾಠಿಗಳಲ್ಲಾ ಶಭಾಷ್ ಸುಬ್ಬು ಎಂದರು. ಮಮತಾ, ಮೈಸೂರು

## ಸ್ವಲ್ಪ ನಗ್ತೀರಾ ಪ್ಲೀಸ್....?

### ಒಂದಕ್ಕೊಂದು ಉಚಿತ

ಮರಿ : ಸೀರೆಕೊಂಡು ಕೊಂಡರೆ ಮತ್ತೊಂದು ಸೀರೆಯನ್ನು ಉಚಿತವಾಗಿ ಕೊಡುವಂತೆ ಇನ್ನೂ ಏನೇನೂ ಉಚಿತವಾಗಿ ಕೊಡ್ತಾರಲ್ಲ, ಹಂಗೇನೆ ? ಒಂದು ಹೆಣ್ಣನ್ನು ಲಗ್ನ ಆದ್ರೆ, ಇನ್ನೊಂದು ಹೆಣ್ಣನ್ನು ಯಾಕೇ ಕೋಡೋದಿಲ್ಲ ?"

ಸಿರಿ : ನೀನೇಳದಂಗೇನಾದ್ರೂ ಆದರೆ ಲಗ್ನ ಆದ ಹೆಣ್ಣು ಕೇಳಬಹುದೇನೋ ನನಗೆ ಏನು ಉಚಿತ ಅಂತ "ಆಗೇನ್ ಮಾಡ್ತೀಯಾ ?"

## ಒತ್ತಡವನ್ನು ಒದ್ದು ನಿಲ್ಲಿ

ಎಲ್ಲಕ್ಕೂ ಹೆಚ್ಚಾಗಿ, ಯಾವುದಕ್ಕೂ ಜಾಸ್ತಿ ತಲೆಕೆಡಿಸಿಕೊಳ್ಳಬೇಡಿ. ಏನೇ ಬಂದರೂ ಸಮರ್ಥವಾಗಿ ಎದುರಿಸುತ್ತೇನೆ ಎಂಬ ಧೈರ್ಯ ನಿಮ್ಮಲ್ಲಿರಲಿ.

.....ಮುಂದುವರಿಯುವುದು

## Life of 21st Century

**ALL ARE LESS**

**OUR PHONES - WIRELESS**

**OUR COOKING - FIRELESS**

**...Cont'd**

## ಮೇಕೆ ಮತ್ತು ಕೋತಿ





ಕೋತಿ ತಾನು ಮೊಸರನ್ನವನ್ನು ತಿಂದು ಎಂಜಲ ಕೈಯನ್ನು ಮೇಕೆಯ ಮೂತಿಗೆ ಸವರಿತು. ಯಜಮಾನ ಬರುವ ಹೊತ್ತಿಗೆ ತನಗೇನೂ ತಿಳಿಯದು ಎಂಬಂತೆ ಕೋತಿ ಮೂಲೆಯೊಂದರಲ್ಲಿ ಕುಳಿತಿತ್ತು. ಯಜಮಾನ ಬಂದು ನೋಡಿದ ಮೊಸರನ್ನಾದ ಪಾತ್ರೆ ಖಾಲಿಯಾಗಿತ್ತು. ಮೇಕೆಯ ಮೂತಿಯಲ್ಲಿ ಮೆತ್ತಿದ್ದ ಮೊಸರನ್ನು ನೋಡಿದ ಅವನ ಸಿಟ್ಟು ನೆತ್ತಿಗೇರಿ ಕೋಲಿನಿಂದ ಮೇಕೆಗೆ ಚೆನ್ನಾಗಿ ಬಾರಿಸಿದ.

ಶ್ರೇಯಾ, ಬೆಂಗಳೂರು, .....ಮುಂದುವರಿಯುವುದು

## ನಮ್ಮ ಮಕ್ಕಳು



ಆರ್. ವಿಶಾಲಾಕ್ಷಿ ಗುಂಡೂರಾವ್
ನಿವೃತ್ತ ಶಿಕ್ಷಕಿ, ಮೈಸೂರು

ಹಬ್ಬ ಹರಿದಿನಗಳ ಪ್ರಾಮುಖ್ಯತೆ, ಊಟ- ತಿಂಡಿಗಳ ಬಗ್ಗೆ ಅವುಗಳ ಉಪಯೋಗ, ಆದಷ್ಟೂ ಹೊರಗಿನ ತಿಂಡಿಗಳಿಂದ ಆಗುವ ಅನಾಹುತಗಳ ಬಗ್ಗೆ ತಿಳಿ ಹೇಳುತ್ತಿರಬೇಕು. ಇದಕ್ಕೆಲ್ಲಾ ಪೋಷಕರಲ್ಲೂ ತ್ಯಾಗ ಮನೋಭಾವ ಇರಬೇಕು. ತಮ್ಮ ಮಕ್ಕಳು ಸರಿಯಾಗಿರಬೇಕಾದರೆ ಪೋಷಕರೂ ಪದೇ ಪದೇ ಹೊರಗಿನ ತಿಂಡಿಗಳು, ಸದಾಕಾಲ ಟಿ.ವಿ. ನೋಡುವುದು, ಮಕ್ಕಳಿಗೆ ಮೊಬೈಲ್ ಕೊಟ್ಟು ಬಾಯಿ ಮುಚ್ಚಿಸಿ ತಮ್ಮ ಕೆಲಸ ಮಾಡಿಕೊಳ್ಳುವುದನ್ನು ಬಿಡಬೇಕು. ಎಲ್ಲಕ್ಕಿಂತ ಮಕ್ಕಳ ಮುಂದೆ ಜಗಳವಾಡದೆ ಕೂಡಿ ಬಾಳುವುದನ್ನು ಅವರಿಗೂ ಕಲಿಸಬೇಕು. ತಾಯಿ- ತಂದೆಯರು ಹಿರಿಯರಿಗೆ ಗೌರವ ಕೊಟ್ಟರೆ ಮಾತ್ರ ಮಕ್ಕಳು ಅವರಿಗೂ ಗೌರವ ಕೊಡುತ್ತಾರೆಂಬುದನ್ನು ಮರೆಯಬಾರದು. ...... ಮುಂದುವರೆಯುವುದು.

## ಆರೋಗ್ಯವಂತ ಹೃದಯಕ್ಕಾಗಿ

**3. ಕಡಿಮೆ ಕೊಬ್ಬಿನ ಬಳಕೆ :** ಕೊಬ್ಬನ್ನು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಬಳಸುವುದರಿಂದ



ಹೃದಯವನ್ನು ಹಲವು ರೋಗಗಳಿಂದ ಪಾರು ಮಾಡಬಹುದು. ಕೊಬ್ಬು ಹೆಚ್ಚುವುದರಿಂದ ಹೃದಯದ ಮೇಲೆ ಒತ್ತಡ ಹೆಚ್ಚುತ್ತದೆ. ಒಂದು ವೇಳೆ ನೀವು ಆರಂಭದಲ್ಲಿಯೇ ಕೊಬ್ಬನ್ನು ಕಡಿಮೆ ಪ್ರಮಾಣದಲ್ಲಿ ಬಳಸುವ ನಿಯಮ ಅನುಸರಿಸಿದರೆ, ನಿಮಗೆ ಹೃದಯಕ್ಕೆ ಸಂಬಂಧಪಟ್ಟ ಗಂಭೀರ ಕಾಯಿಲೆಗಳನ್ನು ಎದುರಿಸುವ ಅವಶ್ಯಕತೆ ಇರುವುದಿಲ್ಲ ಕೊಬ್ಬು ಯುಕ್ತ ಪದಾರ್ಥಗಳನ್ನು ಕಡಿಮೆ ಪ್ರಮಾಣದಲ್ಲಿ ಸೇವಿಸಿ ಪ್ರಾಣಿಗಳಿಂದ ಲಭ್ಯವಾದ ಬೆಣ್ಣೆ, ತುಪ್ಪ ಹಾಗೂ ಮಾಂಸದಲ್ಲಿ ಕೊಬ್ಬು ಹೆಚ್ಚಿನ ಪ್ರಮಾಣದಲ್ಲಿ ಇರುತ್ತವೆ. ಹಾಗೆಯೇ ಬೇಯಿಸಲ್ಪಟ್ಟ ಬಿಸ್ಕತ್ತು ಮತ್ತು ಕೇಕ್‌ನಲ್ಲಿಯೂ ಇದು ಗರಿಷ್ಟ ಪ್ರಮಾಣದಲ್ಲಿ ಇರುತ್ತದೆ. ಇದರಿಂದ ದೇಹದಲ್ಲಿ ಕೊಲೆಸ್ಟ್ರಾಲ್ ಪ್ರಮಾಣ ಹೆಚ್ಚುತ್ತದಲ್ಲದೆ ಹೃದಯ ಕೂಡ ಅಸ್ವಸ್ಥಗೊಳ್ಳುತ್ತದೆ.



ಕನ್ನಡ ರಾಜ್ಯೋತ್ಸವ ಮೆರವಣಿಗೆ ಮೈಸೂರು ನಗರದಲ್ಲಿ



ಆಕಾಶಬುಟ್ಟಿ ಖರೀದಿಯಲ್ಲಿ ಅಂಗಡಿಯೊಂದರಲ್ಲಿ ಯುವತಿಯರು



ಕನ್ನಡ ರಾಜ್ಯೋತ್ಸವ ಮೆರವಣಿಗೆ ಧಾರಾವಾಡ ನಗರದಲ್ಲಿ



ಇಂದೂರಿನಲ್ಲಿ ಗೀತಾ ದೀಪಾವಳಿ ಆಚರಿಸುತ್ತಿರುವುದು



ಕನ್ನಡ ರಾಜ್ಯೋತ್ಸವ ಮೆರವಣಿಗೆ ಮಂಡ್ಯ ನಗರದಲ್ಲಿ



ಪಶ್ಚಿಮಬಂಗಾಳದಲ್ಲಿ ಹಣತೆ ಹೂವಿನ ರಂಗೋಲಿ ಬಿಡಿಸುತ್ತಿರುವ ಮಹಿಳೆ

## ಪತ್ರಿಕೆಯ ಓದುಗರಲ್ಲಿ ಹಾಗೂ ನಾಗರೀಕರಲ್ಲಿ ಮನವಿ



ವಾರಪತ್ರಿಕೆಯ ಬೆಳವಣಿಗೆಗೆ ಹಾಗೂ ಅಭಿವೃದ್ಧಿಗಾಗಿ ಧನ ಸಹಾಯ ಮಾಡುವವರು ಯಾವುದೇ ಅಂಚೆ ಕಛೇರಿಯಲ್ಲಿ ಉಳಿತಾಯ ಖಾತೆಗೆ ನಿಮ್ಮ ಕೈಲಾದಷ್ಟು ಹಣವನ್ನು ಜಮಾ ಮಾಡಿ. ಜಮಾವಾದ ಹಣಕ್ಕೆ ರಶೀತಿ ಕೊಡಲಾಗುವುದು. ಪತ್ರಿಕೆಯು ಈಗ ಆನ್‌ಲೈನ್‌ನಲ್ಲಿ **www.mahilavishesha.in** ಲಭ್ಯವಿದೆ. ಓದಿ ಸಹಾಯ ಮಾಡಿ, ಬೇರೆಯವರಿಗೆ ಸಹಾಯ ಮಾಡಲು ತಿಳಿಸಿ ನಿಮ ಸಹಕಾರದ ಕೈ ಸಂತೋಷದಿಂದ ನೀಡಿ.

| | | |
|---|---|---|
| ಅಂಚೆ ಕಛೇರಿ | : | ಯಾದವಗಿರಿ, ಮೈಸೂರು, ಕರ್ನಾಟಕ |
| ಖಾತೆದಾರರ ಹೆಸರು | : | ಹೆಚ್.ವಿ. ವೆಂಕಟಸುಬ್ಬರಾವ್<br>ಸಂಪಾದಕರು, ಮಹಿಳಾ ವಿಶೇಷ ಪತ್ರಿಕೆ |
| ಉಳಿತಾಯ ಖಾತೆಯ ಸಂಖ್ಯೆ | : | **3098204565** |



**"ನಿಮ್ಮ ಸಹಕಾರ ಸಾವಿರಾರು ಜನರಿಗೆ ಉಪಕಾರ"**

## ಎಂಥಾ ಮಾತು

ಮಹಿಳೆಯರ ನಾಲಿಗೆಯಲ್ಲಿ ಕನ್ನಡ ಭಾಷೆ ನಲಿದರೆ ಮಾತ್ರ ಅದು ಉಳಿಯಲು ಸಾಧ್ಯ ಎಂದು ಜಾನಪದ ವಿದ್ವಾಂಸ ಹಾಗೂ ಮೈಸೂರು ವಿವಿ ನಿವೃತ್ತ ಅಧ್ಯಾಪಕ ಡಾ. ಪಿ.ಕೆ. ರಾಜಶೇಖರ್ ಶ್ರೀ ಜಯಚಾಮರಾಜೇಂದ್ರ ತಾಂತ್ರಿಕ ಮಹಾವಿದ್ಯಾಲಯದ ಸಂಪಾದಕೀಯ ಮಂಡಳಿ ನಡೆಸಿದ ಮೊದಲನೇ ವರ್ಷದ ಕನ್ನಡ ರಾಜ್ಯೋತ್ಸವ ಸಮರಂಭದಲ್ಲಿ ಮಾತಾನಾಡುತ್ತಾ ತಮ್ಮ ಅಭಿಪ್ರಾಯ ತಿಳಿಸಿದರು.

## ಆಹ್ವಾನ ನಮ್ಮದು ಬಹುಮಾನ ನಿಮ್ಮದು

ನಿಮಗೆ ಬಹುಮಾನ ಬೇಕೆ ? ಹಾಗಾದರೆ **www.mahilavishesha.in** ಇಂಟರ್‌ನೆಟ್ ಟೂಲ್‌ಬಾರ್‌ನಲ್ಲಿ ವೈಬ್‌ಸೈಟ್ ಓಪನ್ ಮಾಡಿ ಪತ್ರಿಕೆ ಓದಿ ನಿಮ್ಮ ಅನಿಸಿಕೆಯನ್ನು ಹಾಗೂ ಮೊಬೈಲ್ ಸಂಖ್ಯೆಯನ್ನು **21-11-2015** ರೊಳಗೆ ಇ - ಮೇಲ್ ಮಾಡಿ - ಸಂಪಾದಕರು

Edited, Published & Owned by H.V.Venkatasubbarao, #1021, 14th Cross, 2nd Stage, Hebbal, Mysore-570017 and Printed at Annapoorna Offset Printer, #511, 14th Main, Saraswathipuram, Mysore-570009. Bangalore Office:#734, New Masjid Road, Near Metro Statn., T.Dasarahalli, Bangalore-560057 Mob.:8880334444,Email:mahilavishesha@yahoo.com Editor: H.V. Venkatasubbarao, Decl.No.: MAG.90/2015-16